ಬಿದ್ದಾಗಲೇ ತಾನು ಎಡವಟ್ಟು ಮಾಡಿಕೊಂಡೆ ಎಂಬುದು ಅವನಿಗೆ ತಿಳಿದಿದ್ದು.

'ಇಲ್ಲ ಇಲ್ಲ... ನಾನು ಅವಳೊಂದಿಗೆ ಏನೂ ಮಾಡಲಿಲ್ಲ. ಅವಳು ನನ್ನ ನೋಡಿದ ಕೂಡಲೇ ಗುರ್ತು ಹಿಡಿದಳು' ಎಂದೆಲ್ಲ ಏನೇನೋ ಹೇಳಿ ಮುಚ್ಚಿಹಾಕಲು ಯತ್ನಿಸಿದ.

'ಒಂದೊಮ್ಮೆ ಅವಳು ನಿನ್ನ ಗುರ್ತು ಹಿಡಿಯದೇ ಇದ್ದಿದ್ದರೆ... ನೀನು ಅವಳ ಜತೆ ಮಲಗ್ತಿದ್ದೆ ಅಲ್ವಾ?'

ಅಲ್ಲಿಂದ ಸ್ವಾತಿಯನ್ನು ಸಮಾಧಾನಿಸಲು ರಾತ್ರಿಯಿಡೀ ವ್ಯಯಿಸಿದ್ದ. ಕೊನೆಕೊನೆಯಲ್ಲಿ 'ಸರಿಬಿಡು' 'ಮ್' 'ಹಾಗೇ ನಂಬ್ತೀನಿ' ಅಂತೆಲ್ಲ ಚುಟುಕು ಉತ್ತರಗಳೊಂದಿಗೆ ರಾಜಿಯಾಗುವ ಸೂಚನೆ ತೋರಿದರೂ ಆಳದಲ್ಲೆಲ್ಲೋ ದಿನದಿನಕ್ಕೆ ಬೆಳೆಯುವ ಬಿರುಕೊಂದು ಇಬ್ಬರ ಮಧ್ಯೆ ಮೂಡಿಬಿಟ್ಟಂತೆ ಸದಾನಿಗೆ ಭಾಸವಾಗಿತ್ತು.

ಅದಾದ ನಂತರ ಸ್ವಾತಿ ಸರಿಯಾಗಿ ಮಾತಿಗೆ ಮೆಸೇಜಿಗೆ ಸಿಗುತ್ತಿರಲಿಲ್ಲ. ಕೇಳಿದರೆ 'ಆಫೀಸು ಕೆಲಸದಲ್ಲಿ ಬ್ಯುಸಿ' ಎನ್ನುತ್ತಿದ್ದಳು. ಇನ್ನೂ ಕೆದಕಿದರೆ 'ನಿಂಗೇನು... ನಡೀತದೆ. ಮನೇಲಿ ಆಸ್ತಿ ಬೇಕಾದಷ್ಟಿದೆ. ಆದ್ರೆ ನಂಗೆ ಹಾಗಲ್ಲ. ಕೆಲ್ಸಾ ಮುಖ್ಯ ಕೆಲ್ಸಾ... ಉಳಿದದ್ದೆಲ್ಲಾ ಆಮೇಲೆ' ಎಂದು ರೇಗುತ್ತಿದ್ದಳು. ಶ್ರಾವಂತಿಯ ಪ್ರಸಂಗವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾಳೇನೊ ಎಂದು ಸುತ್ತಿ ಬಳಸಿ ಕೇಳಿದರೆ 'ಇಲ್ಲ, ನಾನು ಅದನ್ನು ಮರ್ತು ಬಿಟ್ಟಿದೀನಿ' ಎಂದು ಚುಟುಕಾಗಿ ಮಾತು ಮುಗಿಸುತ್ತಿದ್ದಳು. ಸದಾನಿಗೂ ಸ್ವಾತಿಯ ವರ್ತನೆಗೆ ಶ್ರಾವಂತಿಯ ಪ್ರಸಂಗವಷ್ಟೇ ಕಾರಣ ಆಗಿರಲಾರದು ಅನಿಸಿತ್ತು.

ಮಲ್ಲೇಶ್ವರದಲ್ಲಿ ಮಂತ್ರಿಮಾಲ್ ಸುತ್ತುವಾಗಲೂ ಸ್ವಾತಿ ಅನ್ಯಮನಸ್ಕಳಾಗಿಯೇ ಇದ್ದಿದ್ದನ್ನು ಸದಾ ಗಮನಿಸಿದ್ದ. ನಂತರ ಹೊರಗೆ ಬಂದ ಮೇಲೆ ಅವಳು ಇಪ್ಪತ್ತು ಸಾವಿರದ ನಿರ್ಬಂಧ ಹಾಕಿದಾಗಲೂ ಅವನು ಅಚ್ಚರಿ ಆಘಾತ ಅನುಭವಿಸುವುದು ಬಿಟ್ಟು ಸಹಜವಾಗಿಯೇ ಸ್ವೀಕರಿಸಿದ್ದ. ತಾನಿದನ್ನು ಮೊದಲೇ ನಿರೀಕ್ಷಿಸಿದ್ದೆನೇನೋ ಎಂಬಂತೆ ಸಣ್ಣ ನಿರಾಳ ಭಾವವೊಂದು ಮನಸ್ಸು ಆವರಿಸಿಕೊಂಡಿದ್ದು ಅವನ ಗಮನಕ್ಕೆ ಬಂದಿತ್ತು. ಈಗ ನೆನಪಿಸಿಕೊಳ್ಳುವಾಗ 'ಅದೇ ತಮ್ಮ ಕೊನೆಯ ಸಲದ ಭೇಟಿ' ಎಂದು ಸದಾ ಬಗೆಯುತ್ತಾನಾದರೂ ಅದರ ನಂತರ ಸ್ವಾತಿ ಮತ್ತೊಮ್ಮೆ ಅವನಿಗೆ ಎದುರಾಗಿದ್ದಳು.

ಅವತ್ತು ಮಂತ್ರಿಮಾಲ್ ಎದುರು ನಿಂತು ಯೋಚಿಸುತ್ತಿದ್ದಾಗ ತಾನೆಂದಿಗೂ ಈ ಮಹಾನಗರದಲ್ಲಿ ಇಪ್ಪತ್ತು ಸಾವಿರ ದುಡಿಯಲಾರೆ ಎಂಬ ನಂಬಿಕೆಯಿಂದಲೇ ಹಾಗೆ ಹೇಳಿದ್ದಾರೆ ಎಂಬ ಭಾವ ಮನಸ್ಸಿಗೆ ಬರುತ್ತಿದ್ದಂತೆಯೇ ಏನಾದರೂ ಮಾಡಿ ತಾನೊಂದು ನೌಕರಿ ಹಿಡಿಯಲೇ ಬೇಕು ಎಂಬ ಹಟ ಮೂಡಿತ್ತು. ಅಂಕಪಟ್ಟಿ, ಬಯೋಡಾಟಾಗಳ ಹೊಸ ಪ್ರತಿಗಳೊಂದಿಗೆ ಸಂದರ್ಶನಗಳಿಗೆ ಹಾಜರಾಗತೊಡಗಿದ. ಆದರೆ ಬಹುತೇಕ ಎಲ್ಲ ಸಂದರ್ಶನಗಳೂ ಇಂಗ್ಲಿಷಿನಲ್ಲಿಯೇ ನಡೆಯುತ್ತಿದ್ದವು. ತನ್ನ ಪರಿಚಯ, ಆಸಕ್ತಿ, ಅಭಿರುಚಿಗಳನ್ನು ವಿವರಿಸುವಷ್ಟು ಇಂಗ್ಲಿಷನ್ನು ರೂಢಿಸಿಕೊಂಡಿದ್ದ ಅವನಿಗೆ ಅದರಾಚೆಗೆ ಒಂದು ಪ್ರಶ್ನೆ ಕೇಳಿದರೂ ನಾಲಿಗೆ ತಡವರಿಸುತ್ತಿತ್ತು.

ಹೀಗೆ ಒಂದು ವಿಫಲ ಸಂದರ್ಶನದ ನಿರಾಸೆಯಲ್ಲಿ ಎಂ.ಜಿ. ರಸ್ತೆಯ ಪಕ್ಕದ ಬೇಂಚಿನ ಮೇಲೆ ಕೂತಿದ್ದ. ಅವತ್ತು ಸಂದರ್ಶನದಲ್ಲಿ ಸಂದರ್ಶಕನೊಬ್ಬ ಇವನ ಇಂಗ್ಲಿಷ್ ಬಗ್ಗೆ ವ್ಯಂಗ್ಯ ಮಾಡಿದ್ದ. 'ನೀಟಾಗಿ ಇಂಗ್ಲಿಷಿನಲ್ಲಿ ಮಾತಾಡಲೂ ಬಾರದೆ ಏನ್ರಿ ಕೆಲಸ ಮಾಡ್ತೀರಾ? ಬಂದ್ಬಿಡ್ತಾರೆ ಎಲ್ಲೆಲ್ಲಿಂದ್ಲೋ...' ಎಂದು ಅವಮಾನಿಸಿದ್ದ. ಅದೂ ಸದಾನ ತಲೆಯಲ್ಲಿ ಕುದಿಯುತ್ತಿತ್ತು. ಆಗಲೇ